## ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ

**ಫೌಜುದಾರಿ ಪ್ರಕರಣ ಸಂಖ್ಯೆ : 94/2020**

**ಚಾ.ಸಾಃ 7, ಫ್ರಾ.ಸಾಃ 4**

| | |
|---|---|
| ಸಾಕ್ಷಿದಾರನ ಹೆಸರು | ವಿನಾಯಕ ಭಟ್ಟ |
| ತಂದೆಯ ಹೆಸರು | ಸುಬ್ರಹ್ಮಣ್ಯ ಭಟ್ಟ |
| ವಯಸ್ಸು | 50 ವರ್ಷಗಳು |
| ಉದ್ಯೋಗ | ರೈತ |
| ವಾಸ್ತವ್ಯ | ಸಾಲ್ಕೋಡ, ಗೋಡಮಕ್ಕಿ, ತಾಃ ಹೊನ್ನಾವರ |

**ಸಾಕ್ಷಿಯನ್ನು ದಿನಾಂಕಃ 17-03-2023 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಸಾಕ್ಷಿಗೆ ಈ ಪ್ರಕರಣದ ನಿಪಿ-6 ಮಾಲು ಜಪ್ತು ಪಂಚನಾಮೆಯನ್ನು ತೋರಿಸಲಾಗಿ ಅದರ ಮೇಲಿನ ಒಂದು ಸಹಿಯನ್ನು ಸಾಕ್ಷಿ ತನ್ನದು ಎಂದು ತಿಳಿಸಿದ್ದರಿಂದ ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ದಿನಾಂಕ 05-08-2020 ರಂದು ಹೊನ್ನಾವರದ ಸಿಪಿಐರವರ ಕಚೇರಿಯಲ್ಲಿ ಮಾಡಿರುತ್ತೇನೆ. ಕಳ್ಳತನವಾಗಿದ್ದ ಚಿನ್ನದ ಆಭರಣಗಳು ಅಂದರೆ ಜುಮುಕಿ ಕುಡುಕು, ಎರಡು ಜೊತೆ ಕಿವಿಯ ಓಲೆಗಳು ಮತ್ತು ಇತರೇ ಆಭರಣಗಳನ್ನು ಚಾಸಾ-10 ಅನಿಲ್ ಶೇಟರವರು ಹಾಜರು ಮಾಡಿದ್ದು ಪೋಲೀಸರು ಅದನ್ನು ಜಪ್ತುಮಾಡಿಕೊಂಡು ಪಂಚನಾಮೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಆ ಸಂದರ್ಭದಲ್ಲಿ ನನ್ನ ಜೊತೆ ಚಾಸಾ-6 ನಾಗೇಶ ಮಡಿವಾಳ ಹಾಜರಿದ್ದರು. ಸದರಿ ಆಭರಣಗಳನ್ನು ಪೋಲಿಸರು ಕರ್ಕಿಯ ಚಾಸಾ-11 ದೀಪಕ ಶೆಟ್ಟಿಯನ್ನು ಕರೆಸಿ ಪರಿಶೀಲಿಸಿ ತೂಕ ಮಾಡಿಸಿ ಮೌಲ್ಯ ಮಾಪನ ಮಾಡಿಸಿರುತ್ತಾರೆ. ಆ ಸಂದರ್ಭದಲ್ಲಿ ಛಾಯಾಚಿತ್ರ ತೆಗೆಸಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಿಪಿ-7 ಛಾಯಾಚಿತ್ರವನ್ನು ಗುರುತಿಸಿರುತ್ತಾರೆ.

ಆಭರಣಗಳನ್ನು ನೋಡಿದರೆ ಗುರುತಿಸುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದ ಒಂದು ಜೊತೆ ಕಿವಿಯೋಲೆ ಒಂದು ಜೊತೆ ಜುಮುಕಿಗಳನ್ನು ಸಾಕ್ಷಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮುಮಾ-1 ಮತ್ತು 2 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ**

ಪೋಲೀಸ್ ಠಾಣೆಯ ಪಕ್ಕದಲ್ಲಿದ್ದ ಮೆಡಿಕಲ್ ಶಾಪಿಗೆ ನಾನು ನನ್ನ ಅಣ್ಣನ ಜೊತೆ ಬಂದಿದ್ದಾಗ ಪೋಲಿಸರು ಠಾಣೆಗೆ ನನ್ನನ್ನು ಕರೆಸಿರುತ್ತಾರೆ. ಚಾಸಾ-10 ರವರು ನಾನು ಹೋಗುವ ಮೊದಲೇ ಬಂದಿದ್ದರು. ಚಾಸಾ-10 ರವರು ಎಷ್ಟು ಪ್ರಕರಣಗಳಿಗೆ ಸಂಬಂಧಿಸಿದ ಆಭರಣಗಳನ್ನು ಹಾಜರು

ಮಾಡಿದ್ದಾರೆ ಎನ್ನುವುದನ್ನು ನನಗೆ ಹೇಳಿರುವುದಿಲ್ಲ. ಚಾಸಾ-10 ರವರು ಸುಮಾರು 25 ರಿಂದ 30 ಆಭರಣಗಳನ್ನು ಆ ದಿನ ಹಾಜರು ಮಾಡಿರಬಹುದು. ನಿಪಿ-6 ರಲ್ಲಿ ಎಷ್ಟು ಪ್ರಕರಣಗಳಿಗೆ ಸಂಬಂಧಿಸಿದ ಆಭರಣಗಳನ್ನು ಹಾಜರು ಮಾಡಲಾಗಿದೆ ಎಂದು ಬರೆಯಲಾಗಿದೆ ಎನ್ನುವುದನ್ನು ಹೇಳಲಾಗುವುದಿಲ್ಲ. ಸದರಿ ದಿನದಂದು ಚಾಸಾ-10 ರವರು ನನ್ನ ಮುಂದೆ ಯಾವುದೇ ಆಭರಣಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಆದರೂ ಸಹ ಚಾಸಾ-10 ರವರು ಬಂಗಾರದ ಆಭರಣಗಳನ್ನು ಹಾಜರು ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-11 ರವರು ಬಂದು ಬಂಗಾರದ ಆಭರಣಗಳನ್ನು ಪರಿಶೀಲಿಸಿ ತೂಕ ಮಾಡಿ ಮೌಲ್ಯ ಮಾಪನ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**